

# ಚೋಟಾ ಭೀಮ!







ಚಿಕ್ಕ ಮಕ್ಕಳಿಗೆ ಊಟ ಕೊಡುವಾಗ ತರಕಾರಿಯನ್ನೆಲ್ಲಾ ತಿಂದು ಖಾಲಿ ಮಾಡು, ನೀನು ದೊಡ್ಡವನಾದ ಮೇಲೆ ಸ್ಟ್ರಾಂಗ್ ಆಗುತ್ತೀಯ ಎಂದು ಪುಸಲಾಯಿಸಿ ತಟ್ಟೆಯಲ್ಲಿರುವ ತರಕಾರಿಯನ್ನೆಲ್ಲಾ ತಿನ್ನಲು ಒತ್ತಾಯ ಮಾಡುವುದು ಸಾಮಾನ್ಯ. ಆದರೆ ಈ ಮಾತನ್ನು ಚೀನಾ ದೇಶದ ಚುಝೌನಲ್ಲಿರುವ ಏಳು ವರ್ಷದ ಬಾಲಕನಿಗೆ ಹೇಳುವ ಅವಶ್ಯಕತೆಯೇ ಇಲ್ಲ ಬಿಡಿ. ಈತ ಈಗಾಗಲೇ ಸಖತ್ ಸ್ಟ್ರಾಂಗ್. ಎಷ್ಟು ಬಲಶಾಲಿ ಎಂದರೆ ಕಾರನ್ನು ರಸ್ತೆಯಲ್ಲಿ ಎಳೆಯಬಲ್ಲ, ತನ್ನ ತಂದೆಯನ್ನೇ ಬೆನ್ನ ಮೇಲೆ ಹೊರಬಲ್ಲ, ಧಾನ್ಯ ತುಂಬಿದ ಮೂಟೆಯನ್ನು ಭುಜದಲ್ಲಿರಿಸಿಕೊಂಡು ಹೊತ್ತೊಯ್ಯಬಲ್ಲ.

ಆಶ್ಚರ್ಯವೆಂದರೆ ಇಷ್ಟೆಲ್ಲಾ ಭಾರ ಹೊತ್ತರೂ ಈತನಿಗೆ ಒಂದಿಷ್ಟೂ ಸುಸ್ತಿಲ್ಲ. ಯಾಂಗ್ ಜಿನ್ಲಾಂಗ್ ಹೆಸರಿನ ಈ ಬಾಲಕ ಈಗಾಗಲೇ 50 ಕೆ.ಜಿಯಷ್ಟಿದ್ದು ಇನ್ನೂ ಬೆಳೆಯುತ್ತಲೇ ಇದ್ದಾನೆ. ತುಂಬು ಗಲ್ಲದ, ನಗುಮೊಗದ ಈ ಮಿನಿಯೇಚರ್ ಸ್ಟ್ರಾಂಗ್‌ಮ್ಯಾನ್ ಈಗಾಗಲೇ ಚೀನಾದ ವೆಬ್ ಸೆಲೆಬ್ರೆಟಿ ಆಗಿಬಿಟ್ಟಿದ್ದಾನೆ. ಈತ ತೋರುವ ಬಲ ಪ್ರದರ್ಶನವನ್ನು ಕಣ್ತುಂಬಿಕೊಳ್ಳಲು ಜನ ಹಿಂಡು ಹಿಂಡಾಗಿ ಜಮಾಯಿಸುತ್ತಾರೆ.

ಸಾಮಾನ್ಯವಾಗಿ 7 ವರ್ಷದ ಮಕ್ಕಳು 20 ರಿಂದ 35 ಕೆ.ಜಿ ಯಷ್ಟು ತೂಕವನ್ನು ಹೊಂದಿರುತ್ತಾರೆ. ಆದರೆ ಜಿನ್ಲಾಂಗ್, ತನ್ನ ಓರಿಗೆಯರಿಗಿಂತ ಗಾತ್ರದಲ್ಲಿ ಬಲು ದೊಡ್ಡವ. ಮೈಗೆ ಹಗ್ಗವನ್ನು ಸುತ್ತಿಕೊಂಡು ಬರೋಬ್ಬರಿ 1.85 ಟನ್ ತೂಕದ ಕಾರನ್ನು ಎಳೆದು ತೋರಿಸುತ್ತಾನೆ. ಸುಮಾರು ತನ್ನ ತೂಕದ ಎರಡು ಪಟ್ಟು ಹೆಚ್ಚು ತೂಕವಿರುವ ತಂದೆಯನ್ನೇ ಎತ್ತುತ್ತಾನೆ. 40 ಕೆ.ಜಿಯ ಗೋಧಿಯ ಚೀಲವನ್ನೋ ಅಥವಾ 100 ಕೆ.ಜಿಯ ಸಿಮೆಂಟ್ ಮೂಟೆಯನ್ನು ಸಲೀಸಾಗಿ ಎತ್ತಿ ಬಿಡುವ ಈತನನ್ನು 'ಚೋಟಾ ಭೀಮ'ನೆಂದು ಕರೆಯುವುದೇ ಹೆಚ್ಚು ಸೂಕ್ತ ಅಲ್ಲವೇ?

■ ಪ್ರಿಯಾಂಕ ವಿ.ಹೆಚ್.